ಎಂದರೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಅಭ್ಯಂತರವಿಲ್ಲ, ಅದು ಯಾವ ರೂಪದಲ್ಲಿ ನೀವು ಚರ್ಚೆಗೆ ಅವಕಾಶ ಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು ಎಂದು ಹೇಳಿದರು. ಇದನ್ನು ಯಾವ ರೂಪದಲ್ಲಿ ಚರ್ಚೆ ಮಾಡಬೇಕು ಎನ್ನುವ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ. ಈಗ ಇಲ್ಲಿ ಅಭಿನಂದನೆ ಹೇಳುವಂಥಾದ್ದು ಧನ್ಯವಾದ ಹೇಳುವಂಥಾದ್ದು ಬೇಡ. ವಿಷಯ ಬರಲಿ. ನಾನು ಬಹಳ careful ಆಗಿದ್ದೇನೆ. ನೀವು ಯಾವ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಕೊಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಇಲ್ಲಿ ಒಂದೇ ಒಂದು ಪ್ರಶ್ನೆ ಇತ್ತು. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೋ, ಇದನ್ನೂ ತೆಗೆದುಕೊಳ್ಳಬೇಕೋ ಎನ್ನುವುದಿತ್ತು ಪ್ರಶ್ನೋತ್ತರ ಆದಮೇಲೆ ಇದಕ್ಕೆ ಅವಕಾಶ ಕೊಡೋಣ ಎನ್ನುವುದು ನನ್ನ ಅಭಿಪ್ರಾಯವಾಗಿತ್ತು. ಇದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಎಂದು ಸರ್ಕಾರದ ಪರವಾಗಿ ಈಗ ಅವರು ಹೇಳಿದರು. ನೀವು ಈಗ preliminary ಯಾಗಿ start ಮಾಡಿ. ಮುಂದೆ ಅದನ್ನು ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೋ ಹಾಗೆ ನಾನು ಕೊಡುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ :** ನೀವು ಒಂದು ಐತಿಹಾಸಿಕ ನಿರ್ಣಯವನ್ನು ತೆಗದುಕೊಂಡಿದ್ದೀರಿ, ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಅಧ್ಯಕ್ಷರು :** ಈಗ ವಿರೋಧ ಪಕ್ಷದ ನಾಯಕರು ಗಮನ ಹರಿಸಬೇಕು, ನಾನು ಐತಿಹಾಸಿಕ ನಿರ್ಣಯವನ್ನೇ ಕೊಡುತ್ತೇನೆ. ಇದನ್ನು ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಿ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೀಗಾಗಿ ಈ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ತಾವು ನಿಲುವಳಿ ಸೂಚನೆಯನ್ನೇನು ತಂದಿದ್ದೀರಿ, ಇದನ್ನು Rule 69 ಗೆ convert ಮಾಡಿ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೇನೆ. ಚರ್ಚೆಯನ್ನು ಪ್ರಾರಂಭ ಮಾಡಿ.

**ಆ) ನಿಯಮ 69ರ ಅಡಿಯಲ್ಲಿ ಚರ್ಚೆ**

**ಶ್ರೀ ಮಲ್ಲಿಕಾರ್ಜುನ ಖರ್ಗೆ :** (ವಿರೋಧ ಪಕ್ಷದ ನಾಯಕರು): ನಮ್ಮ ಪ್ರಸ್ತಾವನೆ ಏನೆಂದರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ದಿ: 25–07–2008ರ ಶುಕ್ರವಾರ ಬೆಂಗಳೂರು ನಗರದಲ್ಲಿ ಸುಮಾರು 7 ಕಡೆ ಏನು ಬಾಂಬ್ ಸ್ಫೋಟವಾಗಿದೆ, ಇದರಲ್ಲಿ ಒಬ್ಬ ಮಹಿಳೆ ಮರಣ ಹೊಂದಿದ್ದಾರೆ ಮತ್ತು 5 ಜನರು ಅತ್ಯಂತ serious ಆಗಿ ಆಸ್ಪತ್ರೆಯಲ್ಲಿದ್ದು, ಅವರು ಚಿಕಿತ್ಸೆಗೊಳಪಡುತ್ತಿದ್ದಾರೆ. ಇನ್ನೂ ಹಲವಾರು ಜನರು ಸಣ್ಣಪುಟ್ಟ ಗಾಯಗಳಾಗಿ